ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
D.P.A.R
"ಚುನಾವಣಾ ಪರ್ವ ದೇಶದ ಗರ್ವ"

NAAC Accredited with "A" Grade-2022

75 ಸ್ವಾತಂತ್ರ್ಯದ ಅಮೃತ ಮಹೋತ್ಸವ
ಪಾವಟೆನಗರ, ಧಾರವಾಡ.
ದೂರವಾಣಿ ಸಂ.2215349
Website : www.kud.ac.in

ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2024/430 ದಿನಾಂಕ: 22 JUL 2024

# ಸುತ್ತೋಲೆ

**ವಿಷಯ :** ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ಸಿಬ್ಬಂದಿಗಳ ಮನೆ ಬಾಡಿಗೆ (HRA) ಭತ್ತೆಗಾಗಿ ಮುಚ್ಚಳಿಕೆ/ಆಯ್ಕೆ ಪತ್ರ ಸಲ್ಲಿಸುವ ಕುರಿತು.

**ಉಲ್ಲೇಖ :** 1) ಸರ್ಕಾರದ ಆದೇಶ ಸಂಖ್ಯೆ. ಆಇ 18 ಎಸ್‌ಆರ್‌ಪಿ 2012 ದಿನಾಂಕ: 19.10.2012.
2) ಲೆಕ್ಕ ಪರಿಶೋಧನಾಧಿಕಾರಿಗಳು, ಕವಿವಿ ಧಾರವಾಡ ಇವರ ವಿಚಾರಣಾ ಪತ್ರ ಸಂಖ್ಯೆ.134 ದಿನಾಂಕ.30.06.2023 ಮತ್ತು ಸಂಖ್ಯೆ.06 ದಿನಾಂಕ.11.08.2023

–@–

ಉಲ್ಲೇಖ–01 ರಲ್ಲಿ ನಮೂದಿಸಿದ ಸರ್ಕಾರಿ ಆದೇಶದ ಅನುಸಾರವಾಗಿ "ಸರ್ಕಾರಿ ನೌಕರನ/ ನೌಕರಳ ಪತ್ನಿಗೆ/ ಪತಿಗೆ ಅದೇ ಸ್ಥಳದಲ್ಲಿ ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ರಾಜ್ಯ ಅಥವಾ ಕೇಂದ್ರ ಸಾರ್ವಜನಿಕ ಉದ್ಯಮಗಳು/ ಸ್ಥಳೀಯ ಸಂಸ್ಥೆಗಳು/ ಅರೆ ಸರ್ಕಾರಿ ಸಂಸ್ಥೆಗಳು/ ಅನುದಾನ ಪಡೆಯುವ ಸಂಸ್ಥೆಗಳು/ ಸಹಕಾರಿ ಸಂಘಗಳು ಬಾಡಿಗೆ ರಹಿತ ವಾಸದ ಮನೆ/ ಬಾಡಿಗೆ ವಾಸದ ಮನೆ ಹಂಚಿಕೆ ಮಾಡಿದ್ದಲ್ಲಿ, ಆ ಮನೆಯಲ್ಲಿ ಅವನು/ ಅವಳು ವಾಸಿಸುತ್ತಿರಲಿ, ಇಲ್ಲದಿರಲಿ ಅಥವಾ ಅವನು/ ಅವಳು ತಾನು ಬಾಡಿಗೆಗೆ ತೆಗೆದುಕೊಂಡ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರಲಿ, ಆ ಸರ್ಕಾರಿ ನೌಕರನು/ ನೌಕರಳು ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಾಗುವುದಿಲ್ಲ" ಎಂಬ ನಿಬಂಧನೆ ಮುಂದುವರೆದು ಅನ್ವಯಿಸುತ್ತದೆ. ಆದರೆ, ಪತಿ ಮತ್ತು ಪತ್ನಿಯು ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ, ಅವರುಗಳು ಅವರ ಅರ್ಹತೆಯ ಮೇರೆಗೆ ಲಭ್ಯವಿರುವ ದರಗಳಲ್ಲಿ ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ ಎಂದು ಸೂಚಿಸಲಾಗಿರುತ್ತದೆ.

ಆದ್ದರಿಂದ, ಉಲ್ಲೇಖಿತ 1 ಸರ್ಕಾರಿ ಆದೇಶದಲ್ಲಿ ನಮೂದಿಸಿದ ಅಂಶಗಳು ಅನ್ವಯಿಸುವಂತೆ, ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ತಮ್ಮ ಪತಿ/ ಪತಿ ಇಬ್ಬರೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೇ ಸೇವೆ ಸಲ್ಲಿಸುತ್ತಿದ್ದಲ್ಲಿ, ಅಂತಹ ಸಿಬ್ಬಂದಿಗಳು ತಾವು ಸೇವೆ ಸಲ್ಲಿಸುತ್ತಿರುವ ಇಲಾಖೆಯ ಮುಖ್ಯಸ್ಥರು ಸುತ್ತೋಲೆಯೊಂದಿಗೆ ಲಗತ್ತಿಸಿದ ಮುಚ್ಚಳಿಕೆ ಪತ್ರದ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಈ ಸುತ್ತೋಲೆ ಹೊರಡಿಸಿದ 07 ದಿನಗಳ ಒಳಗಾಗಿ ಕಡ್ಡಾಯವಾಗಿ ಈ ಕಚೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಮುಂದುವರೆದು, ಸಿಬ್ಬಂದಿಗಳು ಸಲ್ಲಿಸಿದ ಮಾಹಿತಿಯು ತಪ್ಪು ಎಂದು ಕಂಡು ಬಂದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

A Channappa
ಕುಲಸಚಿವರು

ಗೆ

ಎಲ್ಲ ಸಿಬ್ಬಂದಿಗಳ ಗಮನಕ್ಕೆ

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ :**

1) ಕುಲಸಚಿವರು (ಮೌಲ್ಯಮಾಪನ, ಕ.ವಿ.ವಿ ಧಾರವಾಡ.
2) ಹಣಕಾಸು ಅಧಿಕಾರಿಗಳು, ಕ.ವಿ.ವಿ ಧಾರವಾಡ.
3) ಪ್ರಾಚಾರ್ಯರು, ಕರ್ನಾಟಕ ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ/ಸಂಗೀತ/ಕಾನೂನು ಮಹಾವಿದ್ಯಾಲಯ, ಧಾರವಾಡ.
4) ಪ್ರಾಚಾರ್ಯರು, ಕ.ವಿ.ವಿ., ಮಾಧ್ಯಮಿ ಶಾಲೆ, ಧಾರವಾಡ.
5) ಆಡಳಿತ ವಿಭಾಗಗಳ ಎಲ್ಲ ಮುಖ್ಯಸ್ಥರುಗಳು, ಕವಿವಿ, ಧಾರವಾಡ.

## ಮುಚ್ಚಳಿಕೆ ಪತ್ರ

ಡಾ/ಶ್ರೀ/ಶ್ರೀಮತಿ_ _ _ _ _ _ _ _ _ _ _ _ _ _ _ _ _ _ _ _ _ _ ಪ್ರಸಕ್ತ ಹುದ್ದೆ _ _ _ _ _ _ _ _ _ _ _ _ ಆದ ನಾನು ಕರ್ನಾಟಕ ವಿಶ್ವವಿದ್ಯಾಲಯದ ಖಾಯಂ ನೌಕರನಾಗಿರುತ್ತೇನೆ. ನನ್ನ ಪತಿ/ ಪತ್ನಿಯಾದ ಡಾ/ಶ್ರೀ/ಶ್ರೀಮತಿ _ _ _ _ _ _ _ _ _ _ _ _ _ _ _ _ _ ಇವರು ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ _ _ _ _ _ _ _ _ _ _ _ _ _ _ _ ವಿಭಾಗದಲ್ಲಿ _ _ _ _ _ _ _ _ _ _ _ _ _ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಘೋಷಿಸುತ್ತೇನೆ. ಕವಿವಿ ಹೊರಡಿಸಿದ ನಂ.ಕವಿವಿ/ಸಿಆಸುವಿ/ ಶಿಕ್ಷಕೇತರ/10/2024/430 ದಿನಾಂಕ: 22.07.2024 ರಲ್ಲಿ ತಿಳಿಸಿದಂತೆ ಮತ್ತು ಸರ್ಕಾರಿ ಆದೇಶ ನಂ. 18 ಎಸ್‌ಆರ್‌ಪಿ 2012 ದಿನಾಂಕ: 19.10.2012 ರ ಅನ್ವಯ ಈ ಕೆಳಗಿನ ಅನುಕ್ರಮ 1 ರಿಂದ 4 ರಲ್ಲಿನ ಮಾಹಿತಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

| ನಂ | ವಿವರ | ವಿಶ್ವವಿದ್ಯಾಲಯದ ನೌಕರನ ವಿವರಗಳು | ಪತಿ/ ಪತ್ನಿಯ ವಿವರಗಳು |
|---|---|---|---|
| 1. | ಖಾಯಂ ಸೇವೆಗೆ ಹಾಜರಾದ ದಿನಾಂಕ ಮತ್ತು ಹುದ್ದೆ | | |
| 2. | HRMS/ KGID ನಂ | | |
| 3. | ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಹುದ್ದೆ, | | |
| | ಇಲಾಖೆಯ ಹೆಸರು, | | |
| | ಮತ್ತು ದೂರವಾಣಿ ಸಂಖ್ಯೆ | | |
| 4. | ಪ್ರಸ್ತುತ ವೇತನ ಶ್ರೇಣಿ ಮತ್ತು ಮೂಲ ವೇತನ | | |

ಈ ಮೇಲೆ ತಿಳಿಸಲಾದ ಮಾಹಿತಿಯು ನನ್ನ ತಿಳುವಳಿಕೆ ಮಟ್ಟಿಗೆ ಸತ್ಯವಾಗಿರುತ್ತದೆ ಮತ್ತು ವಿಶ್ವವಿದ್ಯಾಲಯವು ನಿಯಮಾನುಸಾರ ತೆಗೆದುಕೊಳ್ಳುವ ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆಂದು ಈ ಮೂಲಕ ಮುಚ್ಚಳಿಕೆ ಪತ್ರವನ್ನು ಸಲ್ಲಿಸುತ್ತಿದ್ದೇನೆ.

ಕವಿವಿ ನೌಕರನ ಸಹಿ

ದಿನಾಂಕ: ಹೆಸರು ____________________